ವಿದ್ಯಾಭ್ಯಾಸದ ಇಲಾಖಾ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸ ೯ 1903ನೇ ಇಸವಿ ಏಪ್ರಿಲ್ ತಾರೀಖು 3.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸ ೯ 1903ನೇ ಇಸವಿ ಜೂ ತಿಂಗಳ ತಾರೀಖು 1ನೇ ಸೋಮವಾರ ಮತ್ತು 2ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವದು :—

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರಿಗೆ.	(1) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯೆ (The art of oral teaching) ಯಾವುದಾದರೂ ಬಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10 ರಿಂದ 1ರ ವರಿಗೆ	(1) ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯೆ ಮತ್ತು ಯಾವದಾದರೂ ಬಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ	10ರಿಂದ 12ರ ವರಿಗೆ	(1) ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯೆ ಮತ್ತು ಯಾವದಾದರೂ ಬಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ
	2ರಿಂದ 5ರ ವರಿಗೆ.	(2)(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳ ಸಂವಿಧಾನ (Organization) ಸ್ಕೂಲ್ ರೆಜಿಸ್ಟರ್‌ಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 5ರ ವರಿಗೆ	(2)ಯಾವದಾದರೂ ಬಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲಿಖ್ಖಗಳನ್ನು ತಯಾರ್ಮಾಡುವ ರೀತಿ	2ರಿಂದ 4ರ ವರಿಗೆ	(2) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರ್ಮಾಡುವ ರೀತಿ
2ನೆಯ ದಿವಸ	10 ರಿಂದ 12ರ ವರಿಗೆ	(2) (b) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)				

ಬಂದೊಂದು ಪತ್ರಿಕೆಗೂ ಕ್ಲಿಪ್ತವಾದಿರುವ ಪೂರ್ಣಾಂಕಗಳಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1903ನೇ ಇಸವಿ ಜೂ ತಿಂಗಳು 10ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1903ನೇ ಇಸವಿ ಜೂ ತಿಂಗಳು 15ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು :—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರಿಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದ ನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ತಿಳಿಸಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲೀ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿ ಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ, ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರಿ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ತಿಳಿಸಲ್ಪಡುವದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದ ಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪ ಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಒಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪ ಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಫಾರೆಸ್ಟ್ ಇಲಾಖೆ.

ತಾರೀಖು 12ನೇ ಮಾರ್ಚಿ 1903, ಮೊಕ್ಕಾಂ ಬೆಂಗಳೂರು.

ನೆಲವಂಗಲದ ತಾಲ್ಲೂಕು ಸೊಲದೇವನಹಳ್ಳಿ, ಗೊರವನಹಳ್ಳಿ, ಬೊಲಿಮಾರನಹಳ್ಳಿ, ಚಾಕಸಂದ್ರ ಈ ಗ್ರಾಮದ ಜಮೀನು ಗಳು ಸ್ಟೇಟ್ ಫಾರೆಸ್ಟಿಗೆ ದಾಖಲ್ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮೂರೀಪತ್ತು ಇಸ್ತಿಹಾರ್ ಗೆಜೆಟ್ಟಿನಲ್ಲಿ ಘೋಷಿಸಿಗಿ ಇದರ ವ್ಯವಸ್ಥೆ ಬಗ್ಗೆ ನಮ್ಮನ್ನು ನೇಮಕ ಮಾಡಿರುವಂತೆ 1903ನೇ ಇಸವಿ ಜನವರಿ 29ನೇ ಮಾರ್ಕ್ಕಂ 462—4476ನೇ ನಂಬರು ನೋಟಿಫಿಕೇಷನ್ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸೊಲದೇವನಹಳ್ಳಿ ಗ್ರಾಮದ ಸರ್ವೆ 5—12—4—6—7—8—16—17—18—9—10—11 ಗೊರವನಹಳ್ಳಿ ಗ್ರಾಮದ ಸರ್ವೆ 13—14—15—17—16 ಬೊಲಿಮಾರನಹಳ್ಳಿ ಗ್ರಾಮದ ಸರ್ವೆ 35—36—37—38—39—40 ಚಾಕಸಂದ್ರ ಗ್ರಾಮದ 22—28—20 ಈ ನಂಬರುಗಳು ಸ್ಟೇಟ್ ಫಾರೆಸ್ಟಿಗೆ ಸೇರಿಕೊಳ್ಳುವದು ಅವಶ್ಯಕವಾಗಿ ಇರುವದ್ದರಿಂದ ಫಾರೆಸ್ಟು ರೆಗ್ಯುಲೇಷನ್ 5ನೇ ಸೆಕ್ಷನ್ ಅನುಸರಿಸಿ ಈ ಜಮೀನುಗಳ ಯಾವ ಹಕ್ಕು ದಾರರೆನ್ನಿದರು ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರುಗಳು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಬಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟ್ಟಿನಲ್ಲಿ ಘೋಷಿಸಿದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ಒಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ವಾಯಿದೆ ಒಂದರುವಾರು ನಮ್ಮ ರೂಬರೂಬು ಹಾಜರಾಗಿ ಬರ್ಯಾ ಮಾಡಬೇಕು.

ಸ್ಟೇಟ್ ಫಾರೆಸ್ಟಿಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನ ಕರುಗಳು ಪ್ರವೇಶ ಮಾಡಲು ನಿರ್ಬಂಧ ಉಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಅದಕಾರಣ ವಾಯಿದೆ ಕಳೆದುಬರುವ ತಕರಾರುಗಳನ್ನು ಅಂಗೀಕರಿ ಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ತಿಳಿಯಪಡಿಸುವದೇನಂದರೆ—ಸ್ಟೇಟ್ ಫಾರೆಸ್ಟ್ ಆಗಿರತಕ್ಕೆಂದು ಮೊಕರರ್ರಾಡುವ ಇಸ್ತಿಹಾರಿನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಘೋಷಿಸಿ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನು ಅಥವಾ ಅದರಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಒಪ್ಪಣೆ ವಿನಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇದೆ.

ಡಿ. ಎಂ. ನರಸಿಂಗರಾವ್,
ಫಾರೆಸ್ಟ್ ಸೆಟ್ಲ್ಮೆಂಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್ ತಾರೀಖು 24ನೇ ಮಾರ್ಚಿ 1903ನೇ ಇಸವಿ.

ಶ್ರೀನಿವಾಸಪುರದ ರೇಂಜ್ ರಾಯಲ್ಪಾಡ್ ಫಾರೆಸ್ಟು ಗಾರ್ಡಾಗಿ ಇದ್ದ ಹಾಲಿ ಮೃತಪಟ್ಟಿರುವ ಸುಬ್ರಹ್ಮಣಯ್ಯ ಎಂಬಾತನು ಕಳದ ನವೆಂಬರ್ ಗುರ್ರೆ ತಾರೀಖು ಲಾಗಾಯತು 27ರ ವರಿಗೆ ಈ ಇಲಾಖೆಯಲ್ಲಿ ಕೆಲಸ ಮಾಡಿದ 27 ರೋಜುಗಳ ತಲಬು ಮಾಹೆ ಯಾನಾ ಎಂಟು ರೂಪಾಯಿನಂತೆ ಆಗುವ 7—3—2 ಪೈ ಮೇಲ್ಕಂಡ ಸುಬ್ರಹ್ಮಣಯ್ಯನಿಗೆ ಪಾವತಿ ಆಗದೆ ಶ್ರೀನಿವಾಸಪುರದ ಫಾರೆಸ್ಟ್ ರೇಂಜಾಫಿಸರಲ್ಲಿ ಅವ್ಯಾನತ್ತಿನಲ್ಲಿರುತ್ತೆ. ಮೇಲ್ಕಂಡ ಪೊಬಲಗನ್ನು ಈ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಹಕ್ಕು ಇರತಕ್ಕವರು ತೆಗದುಕೊಂಡುಹೋಗದಿದ್ದರೆ ಸದರಿ ಪೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.